# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1882/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 10/12/2021

F14

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ (1) ಶ್ರೀ ಅರ್ಜುನ್ ಎ ತಂದೆ ಲೇಟ್ ಅಣ್ಣಯ್ಯ, ಗ್ರಾಮ ಲೆಕ್ಕಾಧಿಕಾರಿಗಳು, ಲಕ್ಕೇನಹಳ್ಳಿ ವೃತ್ತ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (2) ಶ್ರೀ ಎ.ಒ. ರವಿ ತಂದೆ ಓಬಳಯ್ಯ, ಗ್ರಾಮ ಸಹಾಯಕರು, ಲಕ್ಕೇನಹಳ್ಳಿ ವೃತ್ತ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ರಾಮನಗರ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ನೌಕರರಾದ (1) ಶ್ರೀ ಅರ್ಜುನ್ ಎ ತಂದೆ ಲೇಟ್ ಅಣ್ಣಯ್ಯ, ಗ್ರಾಮ ಲೆಕ್ಕಾಧಿಕಾರಿಗಳು, ಲಕ್ಕೇನಹಳ್ಳಿ ವೃತ್ತ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (2) ಶ್ರೀ ಎ.ಒ. ರವಿ ತಂದೆ ಓಬಳಯ್ಯ, ಗ್ರಾಮ ಸಹಾಯಕರು, ಲಕ್ಕೇನಹಳ್ಳಿ ವೃತ್ತ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇವರನ್ನು (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ ಶ್ರೀ ಎಸ್. ಜಿ. ಲಕ್ಷ್ಮೀನರಸಿಂಹಯ್ಯ ತಂದೆ ಲೇ. ಗಂಗನರಸಯ್ಯ, ವಾಸ: ಶಾಂತಪುರ ಗ್ರಾಮ, ಬಾಣವಾಡಿ ಅಂಚೆ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು

ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:-</u> ದೂರುದಾರರ ತನ್ನ ಸೋದರ ಸಂಬಂಧಿಯಾದ ಲಕ್ಕೇನಹಳ್ಳಿ ಗ್ರಾಮದ ನರಸಮ್ಮ ಕೋಂ ಲೇಟ್ ರಾಜಣ್ಣ ಎಂಬುವವರ ಮಾವ ಲೇಟ್ ಕದರಯ್ಯ ಇವರ ಹೆಸರಿನಲ್ಲಿದ್ದ ಲಕ್ಕೇನಹಳ್ಳಿ ಗ್ರಾಮದ ಸರ್ವೆ ನಂ. 13/ಪಿ 23 ರ 01 ಎಕರೆ 11 ಗುಂಟೆ ಜಮೀನಿನ ಪೌತಿ ಖಾತೆಗಾಗಿ 1ನೇ ಎದುರುದಾರರನ್ನು ಭೇಟಿ ಮಾಡಿದಾಗ ಪೌತಿ ಖಾತೆ ಮಾಡಿಕೊಡುವುದಕ್ಕಾಗಿ 8,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ನಂತರ ತನ್ನ ಸಹಾಯಕ 2ನೇ ಎದುರುದಾರರವರ ಮೂಲಕ ಸಹ 8,000/- ರೂ. ಲಂಚಕ್ಕೆ ಬೇಡಿಕೆ ಇಟ್ಟು ಕೊನೆಗೆ 6,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರಿಗೆ ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ರಾಮನಗರ ಜಿಲ್ಲೆ ಎ.ಸಿ.ಬಿ. ಪೋಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು 09/01/2019 ರಂದು ನೀಡಿರುತ್ತಾರೆ. ಈ ಬಗ್ಗೆ ರಾಮನಗರ ಜಿಲ್ಲೆ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 01/2019 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 09/01/2019 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲಿನ ಮೆಮೋರಿ ಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡು ದೂರನ್ನು ಸಲ್ಲಿಸಿದ್ದು ಸದರಿ ಸಿ.ಡಿ.ಯನ್ನು ಪಂಚರಿಗೆ ಕೇಳಿಸಿ, ಲಿಪಿಕರಣ ಮಾಡಿ

ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 6,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆಯಲಾಯಿತು. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಅಶೋಕ ದಿಲೀಪಕುಮಾರ್ ರಾಜನಾಳ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು, ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳು ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ತಲೆಯನ್ನು ಸವರಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 10/01/2019 ರಂದು ದೂರುದಾರರ ಸಂಬಂಧಿಯಾದ ಶ್ರೀ ರವಿಕುಮಾರ ತಂದೆ ಲೇಟ್ ರಾಜಣ್ಣ ಇವರು ಮೊಬೈಲ್ ಮೂಲಕ 1ನೇ ಎದುರುದಾರರನ್ನು ಸಂಪರ್ಕಿಸಿದಾಗ, 2ನೇ ಎದುರುದಾರರು ಸೋಲೂರು ಬಸ್ ನಿಲ್ದಾಣದ ಬಳಿ ಬರುತ್ತಾರೆ, ಅವರಿಗೆ ಲಂಚದ

ಹಣವನ್ನು ನೀಡುವಂತೆ ತಿಳಿಸಿದ್ದರ ಮೇರೆಗೆ, 2ನೇ ಎದುರುದಾರರು ಸೋಲೂರು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಬಂದು ದೂರುದಾರರಿಗೆ ಲಂಚದ ಹಣವನ್ನು ಕೊಡುವಂತೆ ಕೇಳಿದ್ದು, ದೂರುದಾರರು ನೆರಳು ಸಾಕ್ಷಿ ಶ್ರೀ ಅಶೋಕ ದಿಲೀಪಕುಮಾರ್ ರಾಜನಾಳ ಮತ್ತು ದೂರುದಾರರ ಸಂಬಂಧಿ ಮೇಲ್ಕಂಡ ರವಿಕುಮಾರರವರ ಸಮಕ್ಷಮ ಲಂಚದ ಹಣ ರೂ. 6,000/-ವನ್ನು ನೀಡಿರುತ್ತಾರೆ. 2ನೇ ಎದುರುದಾರರು ತಮ್ಮ ಬಲಗೈನಿಂದ ಲಂಚದ ಹಣ ಪಡೆದುಕೊಂಡು ಎಣಿಸಿ ಪ್ಯಾಂಟಿನ ಒಳಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರು ತಮ್ಮ ತಲೆಯನ್ನು ಸವರಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡಿರುತ್ತಾರೆ. ತಕ್ಷಣ ಜೊತೆಯಲ್ಲಿದ್ದ ಕೊ-ಪಂಚ ಉಳಿದ ಸಿಬ್ಬಂದಿ ಮತ್ತು ತನಿಖಾಧಿಕಾರಿಯವರು ಸದರಿ ಸ್ಥಳಕ್ಕೆ ಬಂದು, ಅಲ್ಲಿಯ ನಡವಳಿಕೆಗಳನ್ನು ತಿಳಿದು ಫಿನಾಪ್ತಲಿನ್ ಲೇಪಿತ ಲಂಚದ ಹಣ ರೂ. 6,000/- ವನ್ನು 2ನೇ ಎದುರುದಾರರು ಧರಿಸಿದ್ದ ಪ್ಯಾಂಟಿನ ಒಳ ಜೇಬಿನಿಂದ ತೆಗೆದು ಹಾಜರುಪಡಿಸಿರುತ್ತಾರೆ. ಸದರಿ ನೋಟುಗಳ ಮುಖಬೆಲೆ ಹಾಗೂ ಕ್ರಮ ಸಂಖ್ಯೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಬರೆದುಕೊಂಡಂತಹ ನೋಟುಗಳ ಮುಖಬೆಲೆ ಮತ್ತು ಕ್ರಮ ಸಂಖ್ಯೆಯು ತಾಳೆಯಾಗಿದ್ದು ಇರುತ್ತದೆ. ತನಿಖಾಧಿಕಾರಿಗಳು 2ನೇ ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ದ್ರಾವಣಗಳನ್ನು ಪ್ರತ್ಯೇಕ ಖಾಲಿ ಬಾಟಲ್‌ಗಳಲ್ಲಿ ಸಂಗ್ರಹಿಸಿ ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ. ಸದರಿ 2ನೇ ಎದುರುದಾರರು 1ನೇ ಎದುರುದಾರರಾದ ಅರ್ಜುನ್‌ರವರು ತಿಳಿಸಿದಂತೆ ತಾನು ದೂರುದಾರರಿಂದ 6,000/- ರೂ.ಗಳನ್ನು ಪಡೆದಿರುವುದಾಗಿ ತನಿಖಾಧಿಕಾರಿಗಳಿಗೆ ತಿಳಿಸಿದ್ದು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ 2ನೇ ಎದುರುದಾರರು 1ನೇ ಎದುರುದಾರರಿಗೆ ಮೊಬೈಲ್ ಮುಖಾಂತರ ಮಾತನಾಡಲು ತನಿಖಾಧಿಕಾರಿಗಳು ಹೇಳಿದಾಗ, 2ನೇ ಎದುರುದಾರರು 1ನೇ ಎದುರುದಾರರಿಗೆ "6,000/- ರೂ. ದೂರುದಾರರು ಕೊಟ್ಟಿದ್ದಾರೆ. ಅದನ್ನು ತೆಗೆದುಕೊಂಡಿರುತ್ತೇನೆ" ಎಂದು

ಹೇಳಿರುತ್ತಾರೆ. ಸದರಿ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ 2ನೇ ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ, ಅವರು ತೊಟ್ಟಿದ್ದ ಪ್ಯಾಂಟನ್ನು ಕಳಚಿ ಸದರಿ ಪ್ಯಾಂಟಿನ ಒಳ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಸದರಿ ದ್ರಾವಣಗಳನ್ನು ಪ್ರತ್ಯೇಕ ಖಾಲಿ ಬಾಟಲ್‌ಗಳಲ್ಲಿ ಸಂಗ್ರಹಿಸಿ ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ 2ನೇ ಎದುರುದಾರರಿಗೆ ಪಂಚನಾಮೆಯನ್ನು ಮುಂದುವರೆಸಿ, ಸೋಲೂರು ನಾಡ ಕಛೇರಿಯಲ್ಲಿಯ ಉಪತಹಶೀಲ್ದಾರ್‌ರವರ ಕೊಠಡಿಗೆ ಎಲ್ಲರೂ ಆಗಮಿಸಿ, ಉಪ ತಹಶೀಲ್ದಾರರನ್ನು ಕೇಳಲಾಗಿ ಶ್ರೀ ಶಿವಸ್ವಾಮಿ, ಪ್ರಭಾರ ಉಪತಹಶೀಲ್ದಾರರಾಗಿದ್ದು ಅವರು ಜಿಲ್ಲಾಧಿಕಾರಿಗಳ ಪ್ರವಾಸ ನಿಮಿತ್ತ ಗುಡೇಮಾರನಹಳ್ಳಿಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ನಂತರ ಸದರಿ ಕಛೇರಿಯಲ್ಲಿ ಶ್ರೀಮತಿ ವೈ. ಸುಗುಣ, ಎಸ್.ಡಿ.ಎ. ಇವರಿಗೆ ಸ್ಥಳಾವಕಾಶ ಮಾಡಿಕೊಡಲು ಕೋರಿಕೆ ಪತ್ರ ನೀಡಿ ಅನುಮತಿ ಪತ್ರ ಪಡೆದು ತನಿಖೆ ಮುಂದುವರೆಸಿರುತ್ತಾರೆ. ಪಿನಾಪ್ತಲಿನ್ ಲೇಪಿತ ಲಂಚದ ಹಣವನ್ನು ಇಟ್ಟುಕೊಂಡಂತಹ 2ನೇ ಎದುರುದಾರರ ಪ್ಯಾಂಟನ್ನೂ ಸಹ ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ. ಸದರಿ ಕಛೇರಿಯಲ್ಲಿ 1ನೇ ಎದುರುದಾರರಿಗೆ ಸಮಜಾಯಿಷಿಯನ್ನು ಕೇಳಲಾಗಿ ಸದರಿಯವರು ತಮ್ಮ ಸಮಜಾಯಿಷಿಯಲ್ಲಿ "ಲಕ್ಕೇನಹಳ್ಳಿ ಸರ್ವೆ ನಂ. 13/ಪಿ23 ಜಮೀನಿನ ಪೌತಿ ಖಾತೆಗಾಗಿ ನರಸಮ್ಮ ರವರು ಸೋಲೂರು ನಾಡ ಕಛೇರಿಯಲ್ಲಿ ಅರ್ಜಿ ಹಾಕಿದ್ದು ಈ ಅರ್ಜಿಯು ತನಗೆ ಸೂಚಿತವಾಗಿದ್ದು, ನಮೂನೆ 12 ಹಾಗೂ 21 ರ ಪ್ರಚುರಪಡಿಸುವ ಬಗ್ಗೆ ಕೆಲಸ ಮಾಡಿದ್ದು, ಅರ್ಜಿದಾರರ ಮಗ ರವಿ ಎಂಬವವರು ಫೋನ್ ಮಾಡಿ ಮಾತನಾಡಿದ್ದು ಖಾತೆ ವಿಚಾರವಾಗಿ ದಾಖಲೆ ಸಿದ್ದಪಡಿಸಿ ಗ್ರಾಮ ಸಹಾಯಕ ರವಿ ರವರಿಗೆ ವಹಿಸಿದ್ದು, ಗ್ರಾಮ ಸಹಾಯಕ ರವಿ ರವರು ಅರ್ಜಿದಾರರ ಕಡೆಯಿಂದ ಖಾತೆ ಎಷ್ಟು ಕೇಳಲಿ ಅಂತ ಪ್ರೇರೇಪಿಸಿದ್ದು, ಅವರವರ ಪ್ರೀತಿ ವಿಶ್ವಾಸ ಹೆಚ್ಚು ಕಡಿಮೆ ವ್ಯವಹಾರ ಮಾಡಿಕೊಳ್ಳಿ ಅಂತ ತಿಳಿಸಿದ್ದೆನು. ಈ ದಿನ ಗ್ರಾಮ ಸಹಾಯಕ ರವಿ ರವರು ತನಗೆ ಅರ್ಜಿದಾರರನ್ನು ಭೇಟಿ

ಮಾಡಿರುವೆ, ಎಷ್ಟು ಕೇಳಲಿ ಎಂದು ಅರ್ಜಿದಾರರ ಫೋನ್ ಮೂಲಕ ಮಾತನಾಡಿ ಕೇಳಿರುತ್ತಾನೆ. ಅರ್ಜಿದಾರರು ಫೋನ್ ಮಾಡಿದಾಗ ಸೋಲೂರು ಬಸ್ ನಿಲ್ದಾಣಕ್ಕೆ ಬರುವಂತೆ ತಿಳಿಸಿದನು. ನಂತರ ಶಾಸಕರ ಪ್ರವಾಸ ಕಾರ್ಯಕ್ರಮಕ್ಕೆ ಹೋಗಿದ್ದು ಅಲ್ಲಿಯೂ ಸಹ ಅರ್ಜಿದಾರರ ಕರೆ ಬಂದಿದ್ದು ಅರ್ಜಿದಾರರಿಗೆ ಗ್ರಾಮ ಸಹಾಯಕ ರವಿ ರವರನ್ನು ಭೇಟಿ ಮಾಡಲು ತಿಳಿಸಿದ್ದು ಗ್ರಾಮ ಸಹಾಯಕ ರವಿ ರವರು ನನಗೆ ಫೋನ್ ಮಾಡಿ 6,000/- ರೂ. ದುಡ್ಡು ತೆಗೆದುಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ" ಎಂದು ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ. 2ನೇ ಎದುರುದಾರರಿಗೆ ಲಿಖಿತ ಸಮಜಾಯಿಷಿ ನೀಡುವಂತೆ ಕೇಳಿದಾಗ "ನರಸಮ್ಮರವರ ಮಗ ರವಿ ಕುಮಾರ ಮತ್ತು ಲಕ್ಷ್ಮೀನರಸಿಂಹಯ್ಯ ಇವರ ಜೊತೆ ವಿ.ಎ. ರವರು ಮಾತನಾಡಿ ನನಗೆ ದಿ: 10/01/2019 ರಂದು 12-00 ಘಂಟೆಗೆ ಸೋಲೂರು ಬಸ್ ನಿಲ್ದಾಣಕ್ಕೆ ಹೋಗಲು ತಿಳಿಸಿದರು ಹಾಗೂ 12-10 ಘಂಟೆಯಲ್ಲಿ ರವಿಕುಮಾರ ಫೋನ್ ಮಾಡಿ ಬಸ್ ನಿಲ್ದಾಣದ ಬಳಿ ಇರುವುದಾಗಿ ತಿಳಿಸಿದ್ದು, ನಾನು ಸೋಲೂರು ಬಸ್ ನಿಲ್ದಾಣದಲ್ಲಿ ಲಕ್ಷ್ಮೀನರಸಿಂಹಯ್ಯರವರಿಂದ 6,000/- ರೂ.ಗಳನ್ನು ಅರ್ಜುನ್ ವಿ.ಎ. ರವರು ತಿಳಿಸಿದಂತೆ ತೆಗೆದುಕೊಂಡು ಪ್ಯಾಂಟಿನ ಒಳ ಜೇಬಿನಲ್ಲಿ ಇಟ್ಟುಕೊಂಡು ಅರ್ಜುನ್ ಸರ್ ಗೆ ರವಿಕುಮಾರ್ ಇವರ ಮೊಬೈಲ್‌ನಿಂದ ಫೋನ್ ಮಾಡಿ 6,000/- ರೂ.ಗಳನ್ನು ಕೊಟ್ಟಿದ್ದಾರೆ ಎಂದು ತಿಳಿಸಿದ್ದು, ಎ.ಸಿ.ಬಿ. ಪೋಲೀಸರು ಹಿಡಿದುಕೊಂಡರು" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಸದರಿ ಸಮಜಾಯಿಷಿಗಳು ಸಕಾರಾತ್ಮಕವಾಗಿರುತ್ತವೆ. ಸದರಿಯವರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಮೊಬೈಲ್‌ನಲ್ಲಿ ಮಾತನಾಡಿದ ಸಂಭಾಷಣೆ, ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಸ್ವೀಕರಿಸಿದ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಿಂದ ದೃಢಪಟ್ಟಿರುತ್ತದೆ. ಲಂಚದ ಹಣದ ಬಗ್ಗೆ 1 ಮತ್ತು 2ನೇ ಎದುರುದಾರರಿಂದ ಲಿಖಿತ ಸಮಜಾಯಿಷಿಯನ್ನು ತನಿಖಾಧಿಕಾರಿಗಳು ಪಡೆದು ದಾಖಲಾತಿಗಳನ್ನು ವಶಪಡಿಸಿಕೊಂಡು ಸವಿಸ್ತಾರ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಅಮಾನತ್ ಪಂಚನಾಮೆ ಕಾಲದಲ್ಲಿ ರವಿಕುಮಾರ್ ಮತ್ತು 1ನೇ ಎದುರುದಾರರು ಹಾಗೂ

ರವಿಕುಮಾರ್ ಮತ್ತು 2ನೇ ಎದುರುದಾರರು ಹಾಗೂ ರವಿಕುಮಾರ್ ಮತ್ತು ಎದುರುದಾರರ ಮಧ್ಯ ನಡೆದ ಸಂಭಾಷಣೆಗಳನ್ನು ಮೊಬೈಲ್‌ನಲ್ಲಿ ಕಾಲ್ ರೆಕಾರ್ಡಿಂಗ್ ಮಾಡಿದ್ದು ಅವುಗಳನ್ನು ಲ್ಯಾಪ್‌ಟಾಪ್ ಮೂಲಕ ಡಾಟಾ ಕಾರ್ಡ್ ಬಳಸಿ ಸಿ.ಡಿ.ಗೆ ವರ್ಗಾಯಿಸಿದ್ದು ಸದರಿ ಸಿ.ಡಿ. ಗಳನ್ನು ತಯಾರಿಸಿ ಪಂಚನಾಮೆಯಲ್ಲಿ ಅಪೀಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ 1 ಮತ್ತು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

5) 1ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 21/09/2021 ರಂದು ಮತ್ತು 2ನೇ ಎದುರುದಾರರು ದಿನಾಂಕ 23/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ, ಎದುರುದಾರರು ಜಪ್ತಿ ಮಹಜರ್ ಕಾಲದಲ್ಲಿ ನೀಡಿದ ಸಮಜಾಯಿಷಿಗೂ ಹಾಗೂ ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಗೂ ಪೂರಕವಾಗದೆ ವ್ಯತಿರಿಕ್ತವಾಗಿರುತ್ತವೆ. ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಗಳಲ್ಲಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಾನು ತಾತ್ಕಾಲಿಕ ನೌಕರ ಎಂದು ಉಲ್ಲೇಖಿಸಿದ್ದು ಆತನ ಸೇವಾ ವಿವರ ಪರಿಶೀಲಿಸಲಾಗಿ ಆತನು ಖಾಯಂ ನೌಕರನಾಗಿದ್ದು ಆತನ ನಿವೃತ್ತಿ ದಿನಾಂಕ 31/07/2051 ಆಗಿರುತ್ತದೆ.

6) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

7) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ

ಪರಿಶೀಲಿಸಿದಾಗ, ಸದರಿ 1 ಮತ್ತು 2ನೇ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

8) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9) ಆದ್ದರಿಂದ, 1 ಮತ್ತು 2ನೇ ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಿದೆ.

10) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/12

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.